| | |
|---|---|
| ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ<br>(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)<br>ನಿಗಮ ಕಾರ್ಯಾಲಯ,<br>ಚಾವಿಸನಿನಿ, ಮೈಸೂರು – 570017<br>ದೂರವಾಣಿ ಸಂಖ್ಯೆ: 0821- 2343384 | CHAMUNDESHWARI ELECTRICITY SUPPLY CORPORATION LIMITED<br>(Government of Karnataka undertaking)<br>Corporate Office,<br>CESC, Mysuru-570017<br>Website: www.cescmysore.org<br>E-mail ID: agmtax@cescmysore.org |

Company Identity Number[CIN]:- U40109KA2004SGCO35177

ಕ್ರಮಾಂಕ: ಸೆಸ್ಕ್/ತೆರಿಗೆ/03/10/2021-22/ Cys-872  ದಿನಾಂಕ: 20 SEP 2021

**ಸುತ್ತೋಲೆ**

**ವಿಷಯ:**-ಗ್ರಾಹಕರು/ಗುತ್ತಿಗೆದಾರರಿಂದ ವಸೂಲಾತಿಯ ಜಿ.ಎಸ್.ಟಿ ತೆರಿಗೆ ವಿವರಗಳ ಮಾಹಿತಿಯನ್ನು ಆಂತರಿಕ ಪರಿಶೋಧನೆ ಶಾಖೆಯವರಿಂದ ಪರಿಶೀಲಿಸಿ ದೃಢೀಕರಿಸಿ ಸಲ್ಲಿಸುವ ಬಗ್ಗೆ.

**ಉಲ್ಲೇಖ:** 1) ಈ ಕಛೇರಿಯ ಪತ್ರದ ಸಂಖ್ಯೆ: ಮುಆಅ/ಪ್ರವ್ಯ/ಉಪ್ರವ್ಯ(ಲೆ&ಕಂ)/(ಸಪ್ರವ್ಯ)(ತೆ)/2017-18/ ಸಿವೈಎಸ್-1180/ದಿನಾಂಕ.26.12.2017.

2) ಈ ಕಛೇರಿಯ ಪತ್ರದ ಸಂಖ್ಯೆ:ಮುಆಅ/ಪ್ರವ್ಯ/ಉಪ್ರವ್ಯ(ಲೆ&ಕಂ)/(ಸಪ್ರವ್ಯ)(ತೆ)/2020-21/ ಸಿವೈಎಸ್-269/ದಿನಾಂಕ.03.06.2020.

3) ಈ ಕಛೇರಿಯ ಪತ್ರದ ಸಂಖ್ಯೆ:ಮುಆಅ/ಪ್ರವ್ಯ/ಉಪ್ರವ್ಯ(ಲೆ&ಕಂ)/(ಸಪ್ರವ್ಯ)(ತೆ)/2020-21/ ಸಿವೈಎಸ್-03/ದಿನಾಂಕ.01.04.2021.

4) ಮಾನ್ಯ ಮುಖ್ಯ ಪ್ರಧಾನ ವ್ಯವಸ್ಥಾಪಕರು(ಆಂ.ಪ),ರವರ ಅನುಮೋದಿತ ಟಿಪ್ಪಣಿ ಸಂಖ್ಯೆ:50/ ದಿನಾಂಕ.17.08.2021

********

ದಿನಾಂಕ.01.07.2017ರಿಂದ ಸರಕು ಮತ್ತು ಸೇವಾ ತೆರಿಗೆಯು ಅನುಷ್ಠಾನಗೊಂಡಿರುವ ಹಿನ್ನಲೆಯಲ್ಲಿ ಹೊರ ಪೂರೈಕೆ & ಸೇವೆ(Outward supply & Servics)ಗೆ ಸಂಬಂಧಿಸಿದಂತೆ ಜಿ.ಎಸ್.ಟಿ ತೆರಿಗೆಯನ್ನು ಗ್ರಾಹಕ/ಗುತ್ತಿಗೆದಾರರಿಂದ ಸಂಗ್ರಹಿಸಿ ಸಕ್ಷಮ ಪ್ರಾಧಿಕಾರಕ್ಕೆ ಪಾವತಿಸಲು ಮಾಹಿತಿಯನ್ನು ನಿಗಧಿತ ನಮೂನೆಯಲ್ಲಿ ಪ್ರತಿ ಮಾಹೆವಾರು ದೃಢೀಕೃತ ವಿವರಗಳನ್ನು ನಿಗಮ ಕಛೇರಿಗೆ ಸಲ್ಲಿಸಲು ಎಲ್ಲಾ ವಿಭಾಗಗಳಿಗೆ ಮೇಲ್ಕಂಡ ಉಲ್ಲೇಖಿತ ಪತ್ರ (1)ರಲ್ಲಿ ಸೂಚಿಸಲಾಗಿತ್ತು. ಈ ಸಂಬಂಧ ಉಲ್ಲೇಖಿತ ಪತ್ರ (2) ಮತ್ತು (3)ರಲ್ಲಿ ಈ ವಿಚಾರಕ್ಕೆ ಸಂಬಂಧಪಟ್ಟಂತೆ ಆಂತರಿಕ ಪರಿಶೋಧನೆ ಶಾಖೆಯವರಿಂದ ವಸೂಲಾತಿಯಾದ ತೆರಿಗೆ ಮೊತ್ತದ ವಿವರಗಳ ಮಾಹಿತಿಯನ್ನು ಪರಿಶೀಲಿಸಿ ದೃಢೀಕರಿಸಿ ಸಲ್ಲಿಸುವಂತೆ ತಿಳಿಸಲಾಗಿದ್ದರೂ ಸಹ ಇದುವರವಿಗೂ ಆಂತರಿಕ ಪರಿಶೋಧನಾ ದೃಢೀಕೃತ ಪ್ರತಿಗಳನ್ನು ವಿಭಾಗಗಳು ಸಲ್ಲಿಸಿರುವುದಿಲ್ಲ.

ಈ ಸಂಬಂಧ ಜಿ.ಎಸ್.ಟಿ ತೆರಿಗೆ ವಸೂಲಾತಿಯ ವಿವರಗಳನ್ನು ನಿಗಮ ಕಛೇರಿಗೆ ತಿಂಗಳು ಮುಗಿದ ನಂತರ ಮಾಹೆವಾರು 5ನೇ ದಿನಾಂಕದೊಳಗೆ ಪಾವತಿಗಾಗಿ ಸಲ್ಲಿಸಿರುವ ವಿವರಗಳನ್ನು ಹಾಗೂ ಮಾರ್ಚ್ ಅಂತಿಮ ಲೆಕ್ಕಪತ್ರದ ಅನುಬಂಧಗಳನ್ನು ಪರಿಶೀಲನೆ ಮಾಡುವ ಸಂದರ್ಭದಲ್ಲಿ ಕಂಡುಬಂದಿರುವ ನ್ಯೂನ್ಯತೆಗಳನ್ನು ಪತ್ರ ಮುಖೇನ ಸಂಬಂಧಪಟ್ಟ ವಿಭಾಗಗಳಿಗೆ ತಿಳಿಸಲಾಗಿರುತ್ತದೆ.

ಜಿ.ಎಸ್.ಟಿ ತೆರಿಗೆಯನ್ನು ಪ್ರಾಧಿಕಾರಕ್ಕೆ ಪಾವತಿಸುವ ಮುನ್ನ ಎಲ್ಲಾ ವಿಭಾಗಗಳಿಂದ ಪಡೆದಿರುವ ಮಾಹಿತಿಯ ಕ್ರೋಢೀಕೃತ ಬಿಲ್(Proforma Bill)ನ್ನು ಪರಿಶೀಲನೆಗಾಗಿ ಆಂತರಿಕ ಪರಿಶೋಧನೆ ಶಾಖೆಯವರಿಗೆ ಸಲ್ಲಿಸಿದಾಗ, ಸದರಿಯವರು ಮುಂದಿನ ಬಿಲ್ಲುಗಳನ್ನು ಪಾವತಿಸುವಾಗ ವಿಭಾಗವಾರು ಮಾಹೆಯಾನ ಸಲ್ಲಿಸಲಾಗುವ ಮಾಹಿತಿಯನ್ನು ಸಂಬಂಧಪಟ್ಟ ವಿಭಾಗದ ಆಂತರಿಕ ಪರಿಶೋಧನೆ ಶಾಖೆಯಿಂದ ದೃಢೀಕರಿಸಿರುವ ವಿವರಗಳನ್ನು ಪಡೆಯಬೇಕೆಂದು, ಉಲ್ಲೇಖಿತ ಟಿಪ್ಪಣಿ (4)ರಲ್ಲಿ ಮುಖ್ಯ ಪ್ರಧಾನ ವ್ಯವಸ್ಥಾಪಕರು(ಆಂ ಪ) ರವರು ಸೂಚಿಸಿರುತ್ತಾರೆ.

ಆದ್ದರಿಂದ, ನಿಗಮ ಕಛೇರಿ/ವಲಯ/ವೃತ್ತ ಕಛೇರಿ/ವಿಭಾಗ/ಉಪ ವಿಭಾಗದಲ್ಲಿ ಗ್ರಾಹಕ/ಗುತ್ತಿಗೆದಾರರಿಂದ ವಸೂಲಾತಿಯಾಗುವ ಜಿ.ಎಸ್.ಟಿ. ತೆರಿಗೆ ವಿವರಗಳನ್ನು ಲೆಕ್ಕಘಟಕದ ಹಂತದಲ್ಲಿಯೇ ಅಂತರಿಕ ಪರಿಶೋಧನೆ ಶಾಖೆಯಿಂದ ಪರಿಶೀಲಿಸಿ, ವಿವರಗಳು ಸರಿಯಿರುವ ಬಗ್ಗೆ ಸದರಿಯವರಿಂದ ದೃಢೀಕೃತ ಪ್ರತಿಯನ್ನು ತಿಂಗಳ 8ನೇ ದಿನಾಂಕದೊಳಗೆ ತೆರಿಗೆ ಪಾವತಿಗಾಗಿ ಮಾಹಿತಿಯನ್ನು ನಿಗಮ ಕಛೇರಿಗೆ ಸಲ್ಲಿಸಲು ಸೂಚಿಸಿದೆ.

ತಪ್ಪಿದಲ್ಲಿ/ ವಿಳಂಬವಾಗಿ ಮಾಹಿತಿಯನ್ನು ಸಲ್ಲಿಸಿದ್ದಲ್ಲಿ, ಸಂಬಂಧಿಸಿದ ಅಧಿಕಾರಿ/ನೌಕರರೇ ನೇರ ಹೊಣೆಗಾರರಾಗಿರುತ್ತಾರೆ.

ಮುಖ್ಯ ಆರ್ಥಿಕ ಅಧಿಕಾರಿ,

**ಪ್ರತಿಗಳು:-**

- ಮುಖ್ಯ ಪ್ರಧಾನ ವ್ಯವಸ್ಥಾಪಕರು(ಆಂ. ಪ) ಚಾವಿಸನಿನಿ, ನಿಗಮ ಕಛೇರಿ, ಮೈಸೂರು, ರವರ ಮಾಹಿತಿಗಾಗಿ ಹಾಗೂ ನಿಮ್ಮ ವ್ಯಾಪ್ತಿಯ ಲೆಕ್ಕಾಧಿಕಾರಿಗಳಿಗೆ ಜಿ.ಎಸ್.ಟಿ ತೆರಿಗೆ ಪಾವತಿಯ ವಿವರವನ್ನು ಪರಿಶೀಲಿಸುವಂತೆ ಸೂಚನೆ ನೀಡುವುದು.
- ಮುಖ್ಯ ಇಂಜಿನಿಯರ್(ವಿ), ಚಾವಿಸನಿನಿ, ಕಾ ಮತ್ತು ಪಾ ವಲಯ ಕಛೇರಿ, ಮೈಸೂರು/ಹಾಸನ ರವರ ಮಾಹಿತಿಗಾಗಿ.
- ಉಪ ಲೆಕ್ಕ ನಿಯಂತ್ರಣಾಧಿಕಾರಿಗಳು ಕಾ ಮತ್ತು ಪಾ ವೃತ್ತ ಕಛೇರಿಗಳು, ಚಾವಿಸನಿನಿ.
- ಉಪ ಪ್ರಧಾನ ವ್ಯವಸ್ಥಾಪಕರು (ಎಮ್.ಐ.ಎಸ್) ನಿಗಮದ ಅಧಿಕೃತ ಅಂತರ್ಜಾಲ ತಾಣದಲ್ಲಿ ಪ್ರಕಟಿಸಲು.
- ಎಲ್ಲಾ ಲೆಕ್ಕಾಧಿಕಾರಿಗಳು ಕಾರ್ಯ ಮತ್ತು ಪಾಲನಾ ವಿಭಾಗ, ಚಾವಿಸನಿನಿ.
- ಎಲ್ಲಾ ಲೆಕ್ಕಾಧಿಕಾರಿಗಳು(ಆಂ. ಪ), ಕಾರ್ಯ ಮತ್ತು ಪಾಲನಾ ವಿಭಾಗ, ಚಾವಿಸನಿನಿ.
- ಮುಖ್ಯ ಕಡತಕ್ಕೆ.